**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 492 (558) |
| **ಸದಸ್ಯರ ಹೆಸರು** | : | ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 20-08-2026 |
| **ಉತ್ತರಿಸಬೇಕಾದ ಸಚಿವರು** | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

* * * * *

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಮಹಾನಗರಕ್ಕೆ ಕೃಷ್ಣರಾಜಸಾಗರ ಜಲಾಶಯದಿಂದ ಪ್ರಸ್ತುತ ಪೂರೈಸುತ್ತಿರುವ ನೀರಿನ ಒಟ್ಟು ಪ್ರಮಾಣ ಎಷ್ಟು; | ಕಾವೇರಿ ನದಿ ಪಾತ್ರಗಳ ಅಣೆಕಟ್ಟುಗಳಾದ ಕೃಷ್ಣರಾಜ ಸಾಗರ ಜಲಾಶಯ ಮತ್ತು ಕಬಿನಿ ಜಲಾಶಯಗಳಿಂದ ಕಾವೇರಿ ನೀರು ಸರಬರಾಜು ಯೋಜನೆಯಡಿಯಲ್ಲಿ ಬೆಂಗಳೂರು ನಗರಕ್ಕೆ ಪ್ರತಿ ನಿತ್ಯ ಸುಮಾರು ಒಟ್ಟು 1935 ದಶಲಕ್ಷ ಲೀಟರ್ ನೀರನ್ನು ಹಾಗೂ ವಾರ್ಷಿಕ ಅಂದಾಜು 25.6 ಟಿ.ಎಂ.ಸಿ. ನೀರನ್ನು ಸರಬರಾಜು ಮಾಡಲಾಗುತ್ತಿದ್ದು, ಯೋಜನೆಯ ವಿವರ ಕೆಳಕಂಡಂತಿದೆ: |
| ಆ) | ಬೆಂಗಳೂರಿಗೆ ಕೃಷ್ಣರಾಜಸಾಗರ ಜಲಾಶಯದಿಂದ ಎಷ್ಟು ಹಂತಗಳಲ್ಲಿ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ; (ಯೋಜನೆ, (ಹಂತವಾರು), ಜಾರಿಯಾದ ವರ್ಷ, ತಗುಲಿದ ವೆಚ್ಚ, ವಾರ್ಷಿಕ ಪೂರೈಸುತ್ತಿರುವ ನೀರಿನ ಪ್ರಮಾಣ, ಯೋಜನೆ ಲಾಭ ಪಡೆದ ಅಂದಾಜು ಜನಸಂಖ್ಯೆ, ನೀರು ಎತ್ತುವ ಸ್ಥಳ) ಸಂಪೂರ್ಣ ಮಾಹಿತಿ ನೀಡುವುದು) | (see table below) |

| ಕ್ರ. ಸಂ. | ಕಾವೇರಿ ನೀರು ಸರಬರಾಜು ಯೋಜನೆಯ ಹಂತಗಳು | ಅನುಷ್ಠಾನ ಗೊಳಿಸಿದ ವರ್ಷ | ತಗುಲಿದ ವೆಚ್ಚ (ರೂ. ಕೋಟಿಗಳಲ್ಲಿ) | ದಿನ ನಿತ್ಯ ನೀರು ಸರಬರಾಜು (ದಶಲಕ್ಷ ಲೀಟರ್ ಗಳಲ್ಲಿ) |
|---|---|---|---|---|
| 1. | ಕಾವೇರಿ 1ನೇ ಹಂತ | 1974 | 36 | 140 |
| 2. | ಕಾವೇರಿ 2ನೇ ಹಂತ | 1982 | 76 | 140 |
| 3. | ಕಾವೇರಿ 3ನೇ ಹಂತ | 1993 | 267 | 330 |
| 4. | ಕಾವೇರಿ-4ನೇ ಹಂತ 1ನೇ ಘಟ್ಟ | 2002 | 1072 | 300 |
| 5. | ಕಾವೇರಿ 4ನೇ ಹಂತ 2ನೇ ಘಟ್ಟ | 2012 | 3383 | 550 |
| 6. | ಕಾವೇರಿ 5ನೇ ಹಂತ | 2024 | 4360 | 775 |
| | **ಒಟ್ಟು** | | **9194** | **2235** |

ಸದರಿ ನೀರನ್ನು ಮಳವಳ್ಳಿ ಬಳಿಯ ಶಿವ ಸಮತೋಲನ ಜಲಾಶಯದಿಂದ ಪಡೆಯಲಾಗುತ್ತಿದೆ.

ಒಟ್ಟಾರೆಯಾಗಿ ಮೇಲಿನ ಹಂತಗಳಿಂದ ಸುಮಾರು ಒಂದು ಕೋಟಿ ನಲವತ್ತು ಲಕ್ಷ ಜನತೆಗೆ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಕುಡಿಯುವ ನೀರು ಪೂರೈಸಲು ಜಾರಿಗೆ ತರಲಾಗುತ್ತಿರುವ 6ನೇ ಹಂತದ ಯೋಜನೆಯ ಅಂದಾಜು ವೆಚ್ಚ, ಯೋಜನಾ ಅವಧಿ, ಕೆ.ಆರ್.ಎಸ್ ಜಲಾಶಯದಿಂದ ಒಯ್ಯಲಾಗುವ ನೀರಿನ ಪ್ರಮಾಣ ಸೇರಿದಂತೆ ವಿವರವಾದ ಮಾಹಿತಿ ನೀಡುವುದು; | • ಬೆಂಗಳೂರು ನಗರ ಮತ್ತು ಉಪನಗರಗಳಿಗೆ ಹೆಚ್ಚುವರಿ ಕುಡಿಯುವ ನೀರಿನ ಅಗತ್ಯತೆ ಪೂರೈಸಲು ಸರ್ಕಾರದ ಆದೇಶ ಸಂಖ್ಯೆ: ಜಸಂಇ 136 ಎಂ.ಎನ್.ಕೆ 2023, ದಿನಾಂಕ:17.01.2024ರಲ್ಲಿ 6 ಟಿ.ಎಂ.ಸಿ ನೀರನ್ನು ಹಂಚಿಕೆ ಮಾಡಲಾಗಿದ್ದು, ಇದರಲ್ಲಿ 4 ಟಿ.ಎಂ.ಸಿ ನೀರನ್ನು ಬೆಂಗಳೂರು ನಗರಕ್ಕೆ ಹಾಗೂ ಉಳಿದ 2 ಟಿ.ಎಂ.ಸಿ ನೀರನ್ನು ಉಪನಗರಗಳ ಉಪಯೋಗಕ್ಕಾಗಿ ಮೀಸಲಿಡಲಾಗಿದೆ.<br>• ಅದರಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 22 ಎಂಎನ್ಐ 2025 (ಇ), ದಿನಾಂಕ 05.03.2026 ರಲ್ಲಿ ರೂ.6939.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕಾವೇರಿ 6ನೇ ಹಂತದ ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸುವ ವಿಸ್ತೃತ |

| | | |
|---|---|---|
| | | ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಸದರಿ ಯೋಜನಾ ಅವಧಿಯು 5 ವರ್ಷಗಳಾಗಿರುತ್ತದೆ. |
| ಈ) | ಬೆಂಗಳೂರಿಗೆ ಈವರೆವಿಗೂ ಮಳವಳ್ಳಿಯ ತೊರೆಕಾಡನಹಳ್ಳಿಯಿಂದ ನೀರು ಪೂರೈಕೆ ಮಾಡಲಾಗುತ್ತಿತ್ತು. ಇದೀಗ 6ನೇ ಹಂತದ ಯೋಜನೆಯಲ್ಲಿ ಕಟ್ಟೇರಿಯಿಂದ ನೀರು ಪೂರೈಕೆ ಮಾಡಲು ಯೋಜನೆ ರೂಪಿಸಲು ಕಾರಣವೇನು; | ಬೆಂಗಳೂರು ನಗರದ ಪ್ರಸ್ತುತ ನೀರಿನ ಅವಶ್ಯಕತೆಯನ್ನು ಪೂರೈಸಲು ಕೆ.ಆರ್.ಎಸ್ ಅಣೆಕಟ್ಟೆಯಿಂದ ಪ್ರತಿದಿನ ಸುಮಾರು 900 ಕ್ಯೂಸೆಕ್ಸ್ ನೀರನ್ನು ಪಡೆಯಬೇಕಾಗಿರುತ್ತದೆ. ಆದರೆ, ಕೆ.ಆರ್.ಎಸ್ ಅಣೆಕಟ್ಟೆಯಿಂದ ನೀರನ್ನು ಬಿಡುಗಡೆ ಮಾಡಿ ಬೆಂಗಳೂರು ನಗರಕ್ಕೆ ತಲುಪಿಸುವ ಸಂದರ್ಭದಲ್ಲಿ ನದಿ ಮಾರ್ಗದಲ್ಲಿ ಉಂಟಾಗುವ ನಷ್ಟ ಹಾಗೂ ಇತರೆ ಕಾರಣಗಳಿಂದಾಗಿ ಶಿವ ಅಣೆಕಟ್ಟೆಯ ರೀಚ್‌ಗೆ ಅಗತ್ಯ ಪ್ರಮಾಣದ ನೀರು ತಲುಪಬೇಕಾದರೆ ಕೆ.ಆರ್.ಎಸ್ ಅಣೆಕಟ್ಟೆಯಿಂದ ಸುಮಾರು 1800 ಕ್ಯೂಸೆಕ್ಸ್ ನೀರನ್ನು ಬಿಡುಗಡೆ ಮಾಡಬೇಕಿರುತ್ತದೆ. ಕಾವೇರಿ 6ನೇ ಹಂತದ ಯೋಜನೆ ಅಡಿಯಲ್ಲಿ ಪ್ರತಿನಿತ್ಯ ಜಲಾಶಯದಿಂದ 200 ಕ್ಯೂಸೆಕ್ಸ್ ನೀರನ್ನು ಸರಬರಾಜು ಮಾಡಲು ಸುಮಾರು 400 ಕ್ಯೂಸೆಕ್ಸ್ ನೀರಿನ ಅವಶ್ಯಕತೆಯಿರುತ್ತದೆ. ಇದರಿಂದ ಹೆಚ್ಚಿನ ಪ್ರಮಾಣದ ಕಾವೇರಿ ನೀರು ನದಿ ಮಾರ್ಗದಲ್ಲಿ ನಷ್ಟವಾಗುವ ಸಾಧ್ಯತೆಯಿರುವುದಲ್ಲದೆ, ಲಭ್ಯವಿರುವ ನೀರಿನ ಸಮರ್ಪಕ ಬಳಕೆಯ ಮೇಲೂ ಪರಿಣಾಮ ಬೀರುತ್ತದೆ.<br><br>ಇದಲ್ಲದೇ, ಕಾವೇರಿ 1 ರಿಂದ 5 ನೇ ಹಂತದವರೆಗೆ ಮಳವಳ್ಳಿಯ ತೊರೆಕಾಡನಹಳ್ಳಿ ಯಿಂದ ನೀರು ಪೂರೈಸಲಾಗುತ್ತಿದ್ದು, ಸದರಿ ಕಾರಿಡಾರ್ ಅಡಿಯಲ್ಲಿ ಹೆಚ್ಚುವರಿ ಕೊಳವೆಗಳನ್ನು ಅಳವಡಿಸಲು ಜಾಗದ ಅಭಾವವಿರುತ್ತದೆ.<br><br>ಈ ಕಾರಣಗಳಿಂದಾಗಿ ಕಾವೇರಿ 6ನೇ ಹಂತದ ಯೋಜನೆಯಡಿಯಲ್ಲಿ ಕಟ್ಟೇರಿಯಿಂದ ನೀರು ಪೂರೈಸಲು ಯೋಜಿಸಲಾಗಿರುತ್ತದೆ. |
| ಉ) | ಕೃಷಿ ಚಟುವಟಿಕೆಗಳಿಗೆಂದೇ ನಿರ್ಮಾಣವಾಗಿದ್ದ ಕೆ.ಆರ್.ಎಸ್ ಜಲಾಶಯದ ಮೇಲೆ ಅವಲಂಬಿತವಾಗಿ ಬೆಂಗಳೂರಿಗೆ ಕುಡಿಯುವ ನೀರು ಪೂರೈಸಲು ವಿವಿಧ ಹಂತದ ಯೋಜನೆಗಳನ್ನು ಜಾರಿ ಮಾಡುತ್ತಿರುವುದರಿಂದ ದಿನೇ ದಿನೇ ಕೃಷಿಗೆ ನೀರಿನ ಲಭ್ಯತೆ ಕಡಿಮೆ ಆಗುತ್ತಿದ್ದು ಮಾರಕವಾಗಲಿದೆ ಎನ್ನುವುದು ರೈತರ ಆತಂಕವಾಗಿದ್ದು ಇದಕ್ಕೆ ರೈತರ ಪ್ರತಿರೋಧ ಇರುವುದರ ಬಗ್ಗೆ ಸರ್ಕಾರದ ನಿಲುವೇನು? | ಕಾವೇರಿ ಕಣಿವೆಯಲ್ಲಿ ಬೆಂಗಳೂರು ಮತ್ತು ಅದರ ಉಪ ನಗರಕ್ಕೆ ಕುಡಿಯುವ ನೀರಿನ ಹಂಚಿಕೆಯಾಗಿರುವ ಪ್ರಮಾಣದ ಮಿತಿಯಲ್ಲಿಯೇ ಬಳಸಲಾಗುತ್ತಿರುತ್ತದೆ. |
| ಊ) | ಬೆಂಗಳೂರು ಮಹಾನಗರಕ್ಕೆ ಬೇರೆ ಯಾವ ನದಿ ಮೂಲಗಳಿಂದ ನೀರು ಪೂರೈಸಲಾಗುತ್ತಿದೆ ಅಥವಾ ನೀರು ಪೂರೈಸಲು ಉದ್ದೇಶಿಸಲಾಗಿದೆ? (ವಿವರ ನೀಡುವುದು) | ಬೆಂಗಳೂರು ನಗರಕ್ಕೆ ಮುಂದಿನ ದಿನಗಳಲ್ಲಿ ನೀರಿನ ಅಗತ್ಯತೆ ಪೂರೈಸುವ ಉದ್ದೇಶದಿಂದ ಹೊಸ ಜಲಮೂಲಗಳನ್ನು ಗುರುತಿಸಲು, ಶ್ರೀ ಬಿ.ಎನ್. ತ್ಯಾಗರಾಜ, ಮಾಜಿ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯ ವರದಿಯನ್ವಯ ಎತ್ತಿನಹೊಳೆ ಯೋಜನೆಯಲ್ಲಿ ಬೆಂಗಳೂರು ನಗರಕ್ಕೆ 2.50 ಟಿ.ಎಂ.ಸಿ. ನೀರನ್ನು ಹಂಚಿಕೆ ಮಾಡಲಾಗಿರುತ್ತದೆ. |

**ಸಂಖ್ಯೆ:** ನಅಇ 401 ಎಂಎನ್‌ಐ 2026(ಇ)

**(ಕೃಷ್ಣ ಬೈರೇಗೌಡ)**
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು